ವನ್ನು ನಿರ್ವಹಿಸುತ್ತಿದೆ ಎಂದು ಹೇಳಿದ್ದಾರೆ. ಈ ಕೆಲಸ ವಿಳಂಬವಾಗುವುದಕ್ಕೆ ಇದೇ ಕಾರಣವೊ ಅಥವಾ ಬೇರೆ ಕಾರಣಗಳು ಇವೆಯೇ

ಶ್ರೀ ಎಸ್. ರಮೇಶ :– ಈಗಾಗಲೇ ತಿಳಿಸಿರುವ ರೀತಿ ೧೫ ಲಕ್ಷ ರೂಪಾಯಿ ಹಣ ೧೯೮೯ನೇ ಇಸವಿಯಲ್ಲಿ ಕೇಂದ್ರ ಸರ್ಕಾರದಿಂದ ನಮಗೆ ಬಂದಿದೆ. ಕೇಂದ್ರದ ಲೋಕೋಪಯೋಗಿ ಇಲಾಖೆಯವರು ಈಗಾಗಲೇ ಟೆಂಡರ ಕರೆದಿದ್ದಾರೆ. ರಾಜ್ಯ ಸರಕಾರದ ಒತ್ತಡದಿಂದ ಆದಷ್ಟು ಜಾಗ್ರತೆ ಈ ಕಾರ್ಯ ಪ್ರಾರಂಭವಾಗುತ್ತದೆ

ಶ್ರೀ ಪ್ರಭಾಕರ ಎಸ್. ರಾಣೆ :– ಈಗಾಗಲೇ ಹಣ ಬಿಡುಗಡೆಯಾಗಿ ೨ ವರ್ಷಕ್ಕಿಂತ ಹೆಚ್ಚು ಕಾಲ ಸಂದಿದೆ. ತಮಗೆ ಗೊತ್ತಿರುವ ಹಾಗೆ ಒಂದು ಸಾರಿ ಅಂದಾಜು ವೆಚ್ಚ ತಯಾರು ಮಾಡಿದ ಮೇಲೆ ಕೆಲಸ ಆಗದಿದ್ದರೆ ವರ್ಷ ವರ್ಷ ಪರಿಷ್ಕೃತ ದರಗಳು ಹೆಚ್ಚಾಗುತ್ತಾ ಹೋಗುತ್ತವೆ. ಹಿಂದಿನ ದರಗಳಲ್ಲಿ ಅಂದಾಜು ಮಾಡಿದ್ದು ಈಗ ಕಾರ್ಯಗತ ಮಾಡಬೇಕೆಂದರೆ ಯಾವ ರೀತಿ ತೊಂದರೆಯಾಗುತ್ತದೆಂದು ಸರಕಾರಕ್ಕೆ ಅನುಭವ ಇದೆ. ಹೀಗಿದ್ದಾಗ ಹಣ ಬಿಡುಗಡೆ ಮಾಡಿ ೨ ವರ್ಷ ಕಳೆದರೂ ನಿರ್ಮಾಣ ಕಾರ್ಯ ಪ್ರಾರಂಭಿಸುವುದಕ್ಕೆ ಆಸಕ್ತಿ ವಹಿಸದಿದ್ದರೆ ಆ ತಪ್ಪು ರಾಜ್ಯ ಸರಕಾರದ ಮೇಲೆ ಬರುತ್ತದೆ. ದಯವಿಟ್ಟು ಆದಷ್ಟು ಜಾಗ್ರತೆ ಒಂದು ನಿಗದಿತ ಕಾಲವನ್ನು ನಿರ್ದಿಷ್ಟಪಡಿಸಿ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕು, ಮತ್ತು ಅದಕ್ಕೆ ಅಡಿಗಲ್ಲು ಇಡುವುದಕ್ಕೆ ತಾವೇ ಬರುವ ಒಂದು ದಿನಾಂಕವನ್ನು ನಿರ್ದಿಷ್ಟ ಪಡಿಸುತ್ತೀರಾ ?

ಶ್ರೀ ಎಸ್. ರಮೇಶ : ೧೯೮೯ರಲ್ಲಿ ನಾವು ಜಾಗ ಕೊಟ್ಟಿದ್ದೇವೆ ೧೯೮೮ರಲ್ಲಿ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿ ಬಂದಿದೆ; ಮತ್ತು ಈಗಾಗಲೇ ಕೇಂದ್ರದ ಲೋಕೋಪಯೋಗಿ ಇಲಾಖೆಯವರು ಕೂಡ ಟೆಂಡರ ಕರೆದಿದ್ದಾರೆ. ಆದಷ್ಟು ಜಾಗ್ರತೆ ನಿರ್ಮಾಣ ಕಾರ್ಯವನ್ನು ಶುರು ಮಾಡಬೇಕೆಂದು ಆದೇಶವನ್ನು ನಾವು ಕಳುಹಿಸಿದ್ದೇವೆ. ಸಧ್ಯದಲ್ಲೇ ಅಡಿಗಲ್ಲು ಇಡುವ ದಿನಾಂಕವನ್ನು ಗೊತ್ತು ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈ ಪ್ರಶ್ನೆ ೧೯೩೮ Urban Ceiling ಆ್ಯಕ್ಟಿನ ಕೆಳಗೆ ಕೇಳಿದ ಪ್ರಶ್ನೆಯಾಗಿರುವದರಿಂದ ಇದನ್ನು ಹೆಚ್.ಯು.ಡಿ.ಗೆ ಟ್ರಾನ್ಸಫರ್ ಮಾಡಬೇಕು.

ವಿಷಯ : ರೈತರಿಗೆ ಪಾಸ್ ಬುಕ್‌ಗಳನ್ನು ಒದಗಿಸುವ ಬಗ್ಗೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫೫ (೧೦೫)

ಶ್ರೀ ಜಿ. ರಾಜುಗೌಡ (ಹನೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಲ್ಲಿ ರೈತರುಗಳಿಗೆ ಪಾಸ್ ಬುಕ್‌ಗಳನ್ನು ಒದಗಿಸುವ ಯೋಜನೆ ಇರುವುದು ನಿಜವೇ; ಹಾಗಿದ್ದಲ್ಲಿ ಯಾವಾಗ ಒದಗಿಸಲಾಗುವುದು ?

ಆ) ಅದು ಯಾವ ಯಾವ ಮಾಹಿತಿಗಳನ್ನು ಒಳಗೊಂಡಿದೆ ?

ಇ) ಇದರಿಂದ ರೈತರುಗಳಿಗೆ ಆಗುವ ಪ್ರಯೋಜನ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :- ಆ) ಹೌದು, ೀಘ್ರದಲ್ಲಿ ಒದಗಿಸಲಾಗುವುದು

ಆ) ಖಾತೇದಾರನ ಜಮೀನಿನ ವಿವರಗಳು

೧) ಕಂದಾಯ ಬೇಡಿಕೆ, ವಸೂಲಿ ಮತ್ತು ಬಾಕಿ.

೨) ನೀರಾವರಿ ತೆರಿಗೆ, ಬೇಡಿಕೆ ವಸೂಲಿ ಮತ್ತು ಬಾಕಿ.

೩) ಜಮೀನಿನ ಹಕ್ಕು ಬದಲಾವಣೆ

೪) ಸರ್ಕಾರಿ ಹಾಗೂ ಸಹಕಾರಿ ಸಂಘಗಳಿಂದ ಪಡೆದ ಸಾಲ ಮತ್ತು ಮರು ಪಾವತಿ ಬಗ್ಗೆ ವಿವರಗಳು.

೫) ಜಮೀನಿನ ಮಣ್ಣಿನ ವಿವರ.

ಇ) ಖಾತೇದಾರನ ಜಮೀನಿನ ವಿವರಗಳು ಈ ಖಾತೆ ಪುಸ್ತಕದಲ್ಲಿರುವುದು. ಕಂದಾಯ ಬೇಡಿಕೆ ಮತ್ತು ಬಾಕಿ ವಿವರಗಳು ಸಾಲ ಪಡೆದ ವಿವರ, ಹಣ ಪಾವತಿ ಮಾಡಿದ ವಿವರ, ಬಾಕಿ ವಿವರ, ಮಣ್ಣು ಮತ್ತು ಬೆಳೆಗಳ ವಿವರ.

ಈ) ಈ ಎಲ್ಲಾ ಮಾಹಿತಿಗಳಿದ್ದು ಇವುಗಳ ಪ್ರಯೋಜನವನ್ನು ರೈತರು ಪಡೆದುಕೊಳ್ಳಬಹುದು.

ಶ್ರೀ ಜಿ. ರಾಜುಗೌಡ :- ಹಿಂದೆ ಕೆ. ಹೆಚ್. ಪಾಟೀಲರು ಕಂದಾಯ ಮಂತ್ರಿಗಳಾಗಿದ್ದಾಗ ರಾಜ್ಯದ ರೈತರಿಗೆ ನವೆಂಬರ ೧ನೇ ತಾರೀಖು ಪಾಸ್ ಬುಕ್ ಕೊಡುತ್ತೇವೆಂದು ಹೇಳಿದ್ದರು. ಈಗ ತಾವು ಬಂದಿರುವುದು ಸಂತೋಷ. ಜನವರಿ ೨೬ ರಂದು ರಾಜ್ಯದ ರೈತರಿಗೆ ಪಾಸ್ ಬುಕ್ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :- ಇದರ ಬಗ್ಗೆ ನಾನು ಕಳೆದ ಸಾರಿ ಹೇಳಿದ್ದೇನೆ. ಸುಮಾರು ೬೭ ಲಕ್ಷ ಮಂದಿ ರೈತರು ಏನಿದ್ದಾರೆ, ಅವರಿಗೆ ಪಟ್ಟಾ ಪುಸ್ತಕ ಕೊಡಬೇಕೆಂಬ ತೀರ್ಮಾನ ತೆಗೆದುಕೊಂಡಿದ್ದೇವೆ. ಈಗ ಪುಸ್ತಕ ಪ್ರಿಂಟಿಂಗ್ ಸ್ಟೇಜಿನಲ್ಲಿದೆ. ೨೬ನೇ ಜನವರಿಗೆ ಕನಿಷ್ಟ ಒಂದು ಡಿವಿಜನ್‌ನಲ್ಲಿ ಒಂದು ಜಿಲ್ಲೆಗಾದರೂ ಕೊಡಬೇಕೆಂಬ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಮಾನ್ಯ ಸದಸ್ಯರ ಆಸೆಯನ್ನು ಈಡೇರಿಸುತ್ತೇವೆ.

ಅಧ್ಯಕ್ಷರು : ಜಾಗ್ರತೆ ಆಗದಿದ್ದರೆ ಅಗಷ್ಟ ೧೫ರೊಳಗಾದರೂ ಕೊಡುವಂತೆ ಮಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಜನವರಿ ೨೬ಕ್ಕೆ ಒಂದು ವಿಭಾಗದಲ್ಲಿ ಒಂದು ಜಿಲ್ಲೆಗಾದರೂ ಕೊಡಬೇಕೆಂಬ ತೀರ್ಮಾನ ತೆಗೆದುಕೊಂಡು ಮುದ್ರಣದ ಹಂತದಲ್ಲಿದೆ. ಈಗ ಒಂದು ಕಾಪಿ ಬಂದಿದೆ. ಆ ವೇಳೆಗೆ ೪ ಜಿಲ್ಲೆಗಳಿಗೆ ಕೊಡತಕ್ಕ ಪ್ರಯತ್ನ ಮಾಡಬಹುದು.

೧೧-೩೦ ಎಎಂ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ :– ಸನ್ಮಾನ್ಯ ಸಭಾಧ್ಯಕ್ಷರೆ, ಪಾಸ್ ಬುಕ್ ಬಗ್ಗೆ ಹೇಳುತ್ತೇನೆ. ಇದರಲ್ಲಿ ಜಮೀನಿನ ವಿವರಗಳು ಮಾತ್ರ ಇರುತ್ತವೆ ಎಂದು ಕಂದಾಯ ಮಂತ್ರಿಗಳು ಹೇಳಿದ್ದಾರೆ. ಇಲ್ಲಿ ಒಂದು ಸಲಹೆಯನ್ನು ಹಿಂದಿನ ಅಧಿವೇಶನದಲ್ಲಿ ಕೊಟ್ಟಿದ್ದೇನೆ. ಇದರ ಜೊತೆಗೆ ಸಾಧ್ಯವಾದರೆ ಖಾತೇದಾರನ ಜಾತಿ ಮತ್ತು ಆದಾಯವನ್ನೂ ಇಲ್ಲಿ ಸೇರಿಸುವಂತಾದರೆ ನಮಗೆ ಬಹಳ ಕಷ್ಟ ಪರಿಹಾರ ವಾಗುತ್ತದೆ ಎಂದು ಸೂಚನೆ ಮಾಡುತ್ತಿದ್ದೇನೆ. ತಮಗೆ ಗೊತ್ತಿದೆ, ಬೇರೆ ದೇಶದಲ್ಲಿ ಫ್ಯಾಮಿಲಿ ಬುಕ್ ಎಂದು ಮಾಡಿದ್ದಾರೆ. ಕುಟುಂಬದ ಪುಸ್ತಕ ಎಂದು. ಆ ಮಾಹಿತಿ ಸೇರಿಸಿ ಫೋಟೋಗ್ರಾಫ್ ಹಾಕಿ ಪಾಸ್ ಬುಕ್ ಕೊಟ್ಟರೆ, it will serve both as identity card and also as family book. In the pass Book they should include particulars about income as well as caste so that they need not go to Tahsildar or village accountants for each and every sundry things. ಅಷ್ಟು ಮಾಡಿದರೆ ತಲಾಟಿಗಳ ಕಿರುಕುಳದಿಂದ ತಪ್ಪಿಸಿದಂತಾಗುತ್ತದೆ. ಆದ್ದರಿಂದ ದಯವಿಟ್ಟು ಇದನ್ನು ಪರಿಶೀಲಿಸಬೇಕು.

ಅಧ್ಯಕ್ಷರು :– ಹಾಗೆ ಮಾಡಿದರೆ ಇನ್‌ಕಂ ಸರ್ಟಿಫಿಕೇಟಿಗೆ ಮತ್ತು ಜಾತಿ ಸರ್ಟಿಫಿಕೇಟ್‌ಗೆ ಓಡಾಡಬೇಕಾಗಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಈಗ ಇರುವುದರಲ್ಲಿ ಬೇರೆ ಮಾಹಿತಿ ಇದೆ. ಜಾತಿಯದು ಮಾತ್ರ ಅದರಲ್ಲಿ ಸೇರಿಸಿಲ್ಲ. ಈಗಾಗಲೇ ಅದು ಪ್ರಿಂಟ್‌ಗೆ ಹೋಗಿದೆ ಮುಂದೆ ಸಮಸ್ಯೆ ಬರಬಹುದು ಎಂಬ ದೃಷ್ಟಿಯಿಂದ ಜಾತಿ ಸೇರಿಸುವುದು ಬೇಡ ಎಂದು ಹೆಸರು ವಿಳಾಸ ಎಲ್ಲವನ್ನೂ ಕೊಡುತ್ತಿದ್ದೇವೆ. ಜಾತಿ ಸರ್ಟಿಫಿಕೇಟನ್ನು ಬೇರೆ ಡಿಪಾರ್ಟಮೆಂಟಿನವರು ಕೊಡುತ್ತಾರೆ. ಏಕೆಂದರೆ ಇವತ್ತು ಒಂದು ಧರ್ಮದಲ್ಲಿ ಇರತಕ್ಕ ಮನುಷ್ಯ ನಾಳೆ ಬೇರೆ ಧರ್ಮಕ್ಕೆ ಹೋಗಬಹುದು ಕನ್‌ವರ್ಟ್ ಆಗಿ ಬೇರೆ ಧರ್ಮಕ್ಕೆ ಹೋಗುವುದಕ್ಕೆ ಅವಕಾಶ ಇದೆ. ಆದ್ದರಿಂದ ಸಧ್ಯಕ್ಕೆ ಇರತಕ್ಕ ಪಾಸ್ ಬುಕ್‌ನಲ್ಲಿ ಜಾತಿ ಸೇರಿಸಿಲ್ಲ.

ಶ್ರೀ ಜಿ. ರಾಜಗೌಡ :– ಪಾಸ್ ಬುಕ್‌ನಲ್ಲಿ ಖುಷ್ಕಿ ಜಮೀನು ಎಷ್ಟು, ತರಿ ಜಮೀನು ಎಷ್ಟು, ಬಾಗಾಯ್ತು ಎಷ್ಟು, ಯಾವ ಸಹಕಾರ ಸಂಘಕ್ಕೆ ಸದಸ್ಯನಾಗಿ ದ್ದಾನೆ ಎಲ್ಲಾ ಮಾಹಿತಿ ಕೊಟ್ಟಿರಬೇಕು. ಪಾಸ್ ಬುಕ್ ತೆಗೆದುಕೊಂಡು ಹೋಗಿ ಕೊಟ್ಟ ತಕ್ಷಣ ರಾಷ್ಟ್ರೀಕೃತ ಬ್ಯಾಂಕಿನಲ್ಲಾಗಲೀ ಸಹಕಾರ ಸಂಘದಲ್ಲಾಗಲೀ ತಕ್ಷಣ

ಸಾಲ ಮಂಜೂರು ಮಾಡಬೇಕು. ಅದರಲ್ಲಿ ಪಿತ್ರಾರ್ಜಿತ ಆಸ್ತೀನೋ ಸ್ವಯಾರ್ಜಿತ ಆಸ್ತೀನೋ ಅಥವಾ ಸರ್ಕಾರದಿಂದ ಮಂಜೂರಾಗಿದೆಯೋ ಎಲ್ಲಾ ಮಾಹಿತಿ ಕೊಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮಹಾರಾಷ್ಟ್ರದಲ್ಲಿ ಯಾವ ರೀತಿ ಪಟ್ಟಾ ಪಾಸ್ ಬುಕ್ ಮಾಡಿದ್ದಾರೋ ಅದೇ ಆಧಾರದ ಮೇಲೆ ನಾವು ಮಾಡಿದ್ದೇವೆ. ಇಲ್ಲಿರತಕ್ಕ ಅನೇಕ ಪ್ರಮುಖರು ಇದರಲ್ಲಿ ಆಸಕ್ತಿ ವಹಿಸುವ ಜನ ಏನಿದ್ದಾರೆ ಅವರ ಸಲಹೆ ಪ್ರಕಾರ ಸುಮಾರು ೨೦–೨೫ ಮಾಹಿತಿಗಳನ್ನು ಇದರಲ್ಲಿ ಕೊಟ್ಟಿದೆ. ಬ್ಯಾಂಕ ನವರಾಗಲೀ ಆಫೀಸಿನವರಾಗಲೀ ಇದಕ್ಕೆ ಮಾನ್ಯತೆ ಕೊಡತಕ್ಕ ಮಾಹಿತಿಗಳಿವೆ.

ಶ್ರೀ ಬಿ ಎಸ್. ಯಡಿಯೂರಪ್ಪ :– ಈಗಾಗಲೇ ಪಾಸ್ ಬುಕ್ ಪ್ರಿಂಟ್‌ಗೆ ಹೋಗಿ ವಾಪಸ್ ಬಂದಿಲ್ಲದೆ ಇದ್ದರೆ ಪ್ರೊಫೆಸರ್ ನಂಜುಂಡಸ್ವಾಮಿ ಅವರು ಹೇಳಿದ ಹಾಗೆ ಜಾತಿ ಅದರಲ್ಲಿ ನಮೂದಿಸಿದರೆ ಜಾತಿ ಸರ್ಟಿಫಿಕೇಟ್‌ಗೆ ಅಲೆಯುವುದು ತಪ್ಪುತ್ತದೆ. ಖುಷ್ಕಿ ಎಷ್ಟು, ತರಿ ಎಷ್ಟು ಎಂಬ ಡಿಟೇಲ್ಸ್ ಇದ್ದಾಗ ಒಂದು ಸೊಸೈಟಿಯಲ್ಲಿ ಸಾಲ ತೆಗೆದುಕೊಂಡು ಮತ್ತೊಂದು ಕಡೆ ಹೋದಾಗ ಅವನ ಎಲಿಜಿಬಿಲಿಟಿ ಏನು ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದಕ್ಕೆ ಸ್ವಲ್ಪ ಹಣ ವೇಸ್ಟ್ ಆಗುತ್ತದೆ. ಆದರೂ ಅದನ್ನು ಮಾಡಿದರೆ ಜಾತಿ ಸರ್ಟಿಫಿಕೇಟ್‌ಗೆ ಅಲೆಯುವದು ತಪ್ಪುತ್ತದೆ. ಆದ್ದರಿಂದ ಅದರ ಬಗ್ಗೆ ಯೋಚನೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ನಾವು ಬಹಳ ಕಷ್ಟಪಟ್ಟು ೫ ಕೋಟಿ ರೂಪಾಯಿ ಎಕ್ಸಪೆಂಡಿಚರ್ ಬರುತ್ತದೆಂದು ಫೈನಾನ್ಸ ಡಿಪಾರ್ಟಮೆಂಟಿನವರ ಜೊತೆ ಕಷ್ಟಪಟ್ಟು ಗುದ್ದಾಡಿ ಎರಡು ಕೋಟಿ ರೂಪಾಯಿ ತೆಗೆದುಕೊಂಡಿದ್ದೇವೆ. ಈಗಾಗಲೇ ಲಂಪಸರ್ಮೆಂಟ ಪ್ರಿಂಟ್ ಆಗಿದೆ. ಬೇಕಾದರೆ ಮುಂದೆ ನೋಡೋಣ ಇದನ್ನು ಎಕ್ಸಪರಿಮೆಂಟ್ ಮಾಡಿ ಇನ್ನೂ ಮಾಹಿತಿಬೇಕು ಅನ್ನಿಸಿದರೆ ಅಡಿಷನಲ್ಲಾಗಿ ಮಾಡುವುದಕ್ಕೆ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಪ್ರಶ್ನೆ ಸಂಖ್ಯೆ ೧೦೩೭ ಕ್ಕೆ ಡೆಪ್ಯುಟಿ ಕಮಿಷನರ್ ಅವರಿಂದ ಮಾಹಿತಿ ಬಂದಿಲ್ಲ ಅವರಿಗೆ ಪತ್ರ ಬರೆದಿದ್ದೇವೆ.

ಅಧ್ಯಕ್ಷರು :– ಇದಕ್ಕೆ ಟೈಂ ಬೇಕು; ತಡೆ ಹಿಡಿಯಲಾಗಿದೆ.

ವಿಷಯ : ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲ ಕಾಮಗಿರಿ ಮತ್ತು ಅತಿವೃಷ್ಟಿ ಕಾಮಗಾರಿಗಳು.

ಚುಕ್ಕೆ ಗುರುತಿನ ಪ್ರಶ್ನೆ ೨೫೭ (೧೦೭೦)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?